ಗಾನಮಾಧುರ್ಯ 'ಹಾಲಿನಲ್ಲಿ ಸಕ್ಕರೆ ಕರಗಿದಂತೆ' ಕೇಳುಗರ ಹೃದಯ ತಟ್ಟಿತ್ತು. ಇದು ಸಾತ್ ಸಾತ್ ಸಂಗೀತದ ವೈಶಿಷ್ಟ್ಯ.

### 'ಸಾತ್ ಸಾತ್ ಮ್ಯೂಸಿಕ್'

ಭಾರತ–ಚೀನಾ ನಡುವಿನ ಸಾಂಸ್ಕೃತಿಕ ಸಾಮರಸ್ಯ ಹಾಗೂ ಸಂಗೀತ ಸಮನ್ವಯಕ್ಕೆ ಪೂರಕವಾದ ಸಂಘಟನೆ 'ಸಾತ್ ಸಾತ್ ಮ್ಯೂಸಿಕ್'. ಉಭಯ ದೇಶಗಳ ನಡುವೆ ಮಧುರ ನಂಟನ್ನು ಬೆಳೆಸುವ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಸದ್ಯ ಹಾಂಕಾಂಗ್‌ನ ಲಿಂಗ್‌ನಾನ್ ವಿಶ್ವವಿದ್ಯಾಲಯದ ಇಂಟರ್ ಏಷ್ಯಾ ಕಲ್ಚರ್ ಸೊಸೈಟಿ, 'ಸಾತ್ ಸಾತ್ ಮ್ಯೂಸಿಕ್ ಅಕ್ರಾಸ್ ದಿ ವಾಟರ್ಸ್' ಹೆಸರಿನಡಿ ಭಾರತ ಚೀನಾ ಸಂಗೀತ ಮುಖಾಮುಖಿಯಾಗಿಸುವ ಕೆಲಸ ಮಾಡುತ್ತಿದೆ.

ಭಾಷೆ ಹಾಗೂ ಸಂಗೀತ ಸಮನ್ವಯಗಾರ್ತಿ, ಸಾಂಸ್ಕೃತಿಕ ಸಂಘಟಕಿ ಹಾಗೂ ಹಾಂಕಾಂಗ್‌ನ ಲಿಂಗ್‌ನಾನ್ ವಿವಿಯಲ್ಲಿ ಪ್ರೊಫೆಸರ್ ಆಗಿರುವ ತೇಜಸ್ವಿನಿ ನಿರಂಜನ ಅವರ ಪರಿಕಲ್ಪನೆ ಹಾಗೂ ಪರಿಶ್ರಮದಿಂದ ಈ ಸಂಘಟನೆ ಸಾಕಾರಗೊಂಡಿದೆ. ಇದು ಈಗಾಗಲೇ ಹಲವಾರು ಪ್ರಯೋಗಾತ್ಮಕ ಸಂಗೀತ ಕಛೇರಿಗಳನ್ನು ಚೀನಾದ ಷಾಂಗೈ, ಬೀಜಿಂಗ್, ಹಾಂಕಾಂಗ್ ಹಾಗೂ ನಮ್ಮ ಮುಂಬಯಿ, ಬೆಂಗಳೂರುಗಳಲ್ಲಿ ನಡೆಸಿಕೊಟ್ಟು ಸಂಪೂರ್ಣ ಯಶಸ್ಸನ್ನೂ ಕಂಡಿದೆ.

ಇಲ್ಲಿ ಹಿಂದೂಸ್ತಾನಿ ಸಂಗೀತ, ವಾದ್ಯ ಸಂಗೀತ, ಚೀನಾದ ವಾದ್ಯ ಸಂಗೀತ – ಹೀಗೆ ವೈವಿಧ್ಯಮಯ ಸಂಗೀತ ಸಂಗಮಗೊಳ್ಳುತ್ತದೆ. ಝು ಲಾಯ್ ಮಧ್ಯ ಚೀನಾದ ಜಾನಪದ ಹಾಡುಗಾರ, ಕಿಮ್ಹೊ ಎಲ್‌ಪಿ ಚೀನಾದ ವಾದ್ಯ ಸಂಗೀತಗಾರ, ಹಿಂದೂಸ್ತಾನಿ ಸಂಗೀತ ಗಾಯಕರಾದ ಓಂಕಾರ ಹವಾಲ್ದಾರ, ಬಿಂದು ಮಾಲಿನಿ ಹಾಗೂ ರುತುಜಾ ಲಾಡ್ ಈ ಸಂಗೀತ ತಂಡದ ಸದಸ್ಯರು.

ಸಾತ್ ಸಾತ್ ಸಂಸ್ಥೆ ಹೊಸ ಹೊಸ ಥೀಮ್‌ಗಳೊಂದಿಗೆ ಕಾರ್ಯಕ್ರಮ ನಡೆಸಿಕೊಡುತ್ತದೆ. ಸಂಗೀತ ಮಾಧ್ಯಮ ಮಾತ್ರವಲ್ಲದೆ ಲಲಿತಕಲೆಗಳಾದ ನೃತ್ಯ, ನಾಟಕ, ಸಿನಿಮಾ, ದೃಶ್ಯಕಲೆ, ಹಾಗೂ ಕರಕುಶಲ ಕಲೆಗಳ ಪ್ರದರ್ಶನವನ್ನೂ ಒಳಗೊಂಡಿದೆ.

### ಸಂಗೀತದ ಸೀಮೋಲ್ಲಂಘನ

ದೇಶಗಳ ನಡುವೆ ಸಮನ್ವಯ ಕಲ್ಪಿಸುವ ವಿಶಿಷ್ಟ ಪರಿಕಲ್ಪನೆ ಸಾಕಾರಗೊಂಡು, ದೇಶ ಭಾಷೆಗಳ ಗಡಿ ಮೀರಿದ ಸ್ವರಮಾಧುರ್ಯ ಅನಾವರಣಗೊಳ್ಳಲು ಸಾಧ್ಯವಾಗಿದ್ದು ಹೇಗೆ? – ಈ ಪ್ರಶ್ನೆಗೆ ಉತ್ತರವನ್ನು 'ಸಾತ್ ಸಾತ್ ಸಂಗೀತ'ದ ರೂವಾರಿ ತೇಜಸ್ವಿನಿ ನಿರಂಜನ ಅವರ ಮಾತುಗಳಲ್ಲೇ ಕೇಳಿ.

''ಹಿಂದೂಸ್ತಾನಿ ಸಂಗೀತದಲ್ಲಿ ನನಗೆ ಅತೀವ ಆಸಕ್ತಿ. ಹೀಗಾಗಿ ಗಾಯಕ ಓಂಕಾರ್ ಹವಾಲ್ದಾರ್ ಬಳಿ ಸಂಗೀತ ಕಲಿಯಲಾರಂಭಿಸಿದೆ. ಅದಾಗಿ ಮುಂಬಯಿಯಲ್ಲಿ ನೀಲಾ ಭಾಗ್ವತ್ ಅವರ ಬಳಿಯೂ ಸಂಗೀತ ಕಲಿಯಲು ಶುರು ಮಾಡಿದೆ. ಮುಂಬಯಿ ಹಿಂದೂಸ್ತಾನಿ ಸಂಗೀತದ ಪ್ರಮುಖ ಕೇಂದ್ರ. ಅಲ್ಲಿ ನೂರಾರು ಉತ್ತಮ ಕಲಾವಿದರಿದ್ದಾರೆ. ಆದರೆ ಮುಂಬಯಿಗೆ ಹಿಂದೂಸ್ತಾನಿ ಸಂಗೀತ ಯಾಕೆ–ಹೇಗೆ ಬಂತು ಎಂಬುದು ಅನೇಕರಿಗೆ ಗೊತ್ತೇ ಇಲ್ಲ. ಇದನ್ನು ತಿಳಿಯುವ ಕುತೂಹಲಕ್ಕಾಗಿ ಹಿಂದೂಸ್ತಾನಿ ಸಂಗೀತದ ಬಗ್ಗೆ ಅಧ್ಯಯನ ಮಾಡಿ ಒಂದು ಪುಸ್ತಕ ಬರೆದೆ.

ಮುಂಬಯಿಯ ಗಿರಗಾಂವ್‌ನಲ್ಲಿ ಹಿಂದೂಸ್ತಾನಿ ಸಂಗೀತದ ಇತಿಹಾಸ ಗೊತ್ತಿಲ್ಲ. ಗಿರ್‌ಗಾಂವ್‌ನ ಫೋರ್ಟ್ ಏರಿಯಾದಲ್ಲಿ ಬ್ರಿಟಿಷರು ಇದ್ದಾಗ ಈ ಭಾಗವನ್ನು 'ನೇಟಿವ್ ಟೌನ್' ಎಂದು ಕರೆಯುತ್ತಿದ್ದರು. 1880ನಿಂದ 1980ವರೆಗೂ ಸಂಗೀತ ಕಲೀತಾ ಇದ್ರು ಎಂಬ ವಿಷಯ ಸಂಶೋಧನೆ ಮಾಡ್ತಾ ಮಾಡ್ತಾ ಗೊತ್ತಾಯ್ತು. ಜೊತೆಗೆ ಗಿರ್‌ಗಾಂವ್ ಪ್ರದೇಶದಲ್ಲಿ ಹಿಂದೂಸ್ತಾನಿ ಸಂಗೀತಕ್ಕೆ ಶತಮಾನಕ್ಕೂ ಹೆಚ್ಚಿನ ಇತಿಹಾಸವಿರುವುದು ತಿಳಿಯಿತು. ಅದನ್ನು ಜನರಿಗೆ ತಿಳಿಸುವ ಸಲುವಾಗಿ 2015ರಲ್ಲಿ ಮುಂಬಯಿಯಲ್ಲಿ 'ಮೇಕಿಂಗ್ ಮ್ಯೂಸಿಕ್; ಮೇಕಿಂಗ್ ಸ್ಪೇಸ್' ಎಂಬ ಪ್ರದರ್ಶನ ಮಾಡಿದೆವು.

ಮುಂಬಯಿಯಲ್ಲಿ ಹಿಂದೂಸ್ತಾನಿ ಸಂಗೀತ



ಸಂಗೀತ ಕಛೇರಿಯೊಂದರಲ್ಲಿ ಗಾಯಕಿಯರಾದ ರುತುಜಾ ಲಾಡ್ ಹಾಗೂ ಬಿಂದುಮಾಲಿನಿ

## ಥ್ರಿಲ್ಲಿಂಗ್ ಎಕ್ಸ್‌ಪೀರಿಯೆನ್ಸ್

ಚೀನಾ ಸಂಗೀತದಲ್ಲಿ ಮೈಕ್ರೋ ಟೋನ್ಸ್ ವಿಭಿನ್ನವಾಗಿರುತ್ತದೆ. ನಮ್ಮ ಹಿಂದೂಸ್ತಾನಿ ಸಂಗೀತ ರಾಗಗಳ ನೋಟ್ಸ್ ಅವರಿಗೆ ಬಹಳ ಹೊಸತು ಅನಿಸುತ್ತದೆ. ನಾವೆಲ್ಲ ಜೊತೆಯಾಗಿ ಸಂಗೀತದ ಕೆಲಸ ಮಾಡುವಾಗ ಬಹಳ ಥ್ರಿಲ್ಲಿಂಗ್ ಎಕ್ಸ್‌ಪೀರಿಯೆನ್ಸ್ ಆಗುತ್ತದೆ. ವಿವಿಧ ಭಾಷೆಯ ಜನ ಸಂಗೀತದೊಂದಿಗೆ ಹೇಗೆ ಬೆಸೆಯುತ್ತಾರೆ ಎಂಬುದು ಇಂತಹ ಪ್ರಯೋಗಾತ್ಮಕ ಸಂಗೀತದಿಂದ ಮಾತ್ರ ಸಾಧ್ಯ. ಇದನ್ನು ನಾನು ಭಾರತ–ಚೀನಾ ಸಂಗೀತ ಸಂಭ್ರಮದಲ್ಲಿ ಕಂಡುಕೊಂಡಿದ್ದೇನೆ.

**-ಬಿಂದುಮಾಲಿನಿ, ಗಾಯಕಿ**



## ತೇಜಸ್ವಿನಿ ನಿರಂಜನ

ಲೇಖಕಿ, ಸಂಗೀತ ಸಂಘಟಕಿ, ಭಾಷಾಂತರ ತಜ್ಞೆ, ಸಾಂಸ್ಕೃತಿಕ ಸಿದ್ಧಾಂತಕಿ (cultural Theorist), ಪ್ರಾಧ್ಯಾಪಕಿ – ಹೀಗೆ ಹತ್ತು ಹಲವು ವಿಶೇಷಣಗಳನ್ನು ಹೊಂದಿರುವ ತೇಜಸ್ವಿನಿ ನಿರಂಜನ ಸದ್ಯ ಹಾಂಕಾಂಗ್‌ನ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್.

ಹೆಸರಾಂತ ಕಥೆಗಾರ್ತಿ ಅನುಪಮಾ ನಿರಂಜನ ಹಾಗೂ ನಿರಂಜನ ದಂಪತಿಯ ಪುತ್ರಿಯಾಗಿರುವ ತೇಜಸ್ವಿನಿ ಸಾಹಿತ್ಯ, ಸಂಗೀತದಲ್ಲಿ ಸದಾ ಪ್ರಯೋಗಶೀಲತೆಗೆ ಒಡ್ಡಿಕೊಳ್ಳುವ ಗುಣ ಹೊಂದಿದವರು. ಆಂಗ್ಲ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ, ಭಾಷಾ ವಿಜ್ಞಾನದಲ್ಲಿ ಎಂಫಿಲ್ ಪದವಿ ಹಾಗೂ ಲಾಸ್‌ಏಂಜಲೀಸ್‌ನ ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪದವಿಯನ್ನು ಪಡೆದ ಶಿಕ್ಷಣ ತಜ್ಞೆ.

ಹಿಂದೂಸ್ತಾನಿ ಸಂಗೀತದ ಬಗ್ಗೆ ಅತೀವ ಆಸಕ್ತಿ ಇರುವ ತೇಜಸ್ವಿನಿ, 62ರ ಈ (ಹುಟ್ಟಿದ್ದು 1958 ಜುಲೈ 26) ಹರೆಯದಲ್ಲೂ ಸದಾ ಚೈತನ್ಯದ ಚಿಲುಮೆಯಂತಿದ್ದು, ಸಂಗೀತ ಕಲಿಕೆಯಲ್ಲೂ ತೊಡಗಿದ್ದಾರೆ. ಭಾರತೀಯ ಸಂಗೀತದ ಬಗ್ಗೆ ಆಳವಾದ ಅಧ್ಯಯನ ಕೈಗೊಂಡಿದ್ದು, ಹಿಂದೂಸ್ತಾನಿ ಸಂಗೀತದ ಬಗ್ಗೆಯೇ ಒಂದು ಉತ್ತಮ ಹಾಗೂ ಉಪಯುಕ್ತ ಸಾಕ್ಷ್ಯಚಿತ್ರವನ್ನೂ ನಿರ್ಮಿಸಿದ್ದಾರೆ.